ಕೊಡುವುದಲ್ಲದೆ ಮನೆದಳ ಇಲ್ಲದವರಿಗೆ ಮನೆದಳ (ಹೌಸ್ ಸೈಟ್) ಮತ್ತು ಜನತಾ ಮನೆಗಳನ್ನು ಮಂಜೂರು ಮಾಡಲಾಗುವುದು.

ಆ) ಮೇಲಿನಂತೆ.

ಇ) ಬೆಳಗಾವಿ ಜಿಲ್ಲೆಯಲ್ಲಿ ೧೯ ಜನ ಜೀತ ವಿಮುಕ್ತರನ್ನು ಗುರುತಿಸಲಾಗಿದೆ. ಅದರಲ್ಲಿ ೧೦ ಜನರಿಗೆ ಪುನರ್ವಸತಿ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಈ ಜನರಿಗೆ ಭೂಮಿ ಮಂಜೂರು ಮಾಡುವ ದೊಂದಿಗೆ ೪೦೦೦ ರೂಪಾಯಿಗಳ ಹಾಲು ಕರೆಯುವ ಹಸುಗಳನ್ನು ಕೃಷಿ ಉಪಕರಣಗಳನ್ನು ಬೀಜ ಮತ್ತು ಗೊಬ್ಬರಗಳನ್ನು ಕೊಡಲಾಗಿದೆ, ಇದನ್ನು ಸಪದತ್ತಿ, ತಾಲ್ಲೂಕಿನ ಹಂಚಿನಾಳ ಗ್ರಾಮದಲ್ಲಿ ಅನುಷ್ಠಾನ ಗೊಳಿಸಲಾಗಿದೆ. ಉಳಿದ ೯ ಜನಗಳ ವಿವರಕ್ಕೆ ಹೀಗಿದೆ. ನಾಲ್ಕು ಜನ ಎಲ್ಲಿದ್ದಾರೆ ಗೊತ್ತಿಲ್ಲ, ಇಬ್ಬರೂ ಜಿಲ್ಲೆ ಬಿಟ್ಟು ಹೋಗಿದ್ದಾರೆ ಒಬ್ಬರು ತೀರಿಕೊಂಡಿದ್ದಾಕೆ. ಇಬ್ಬರು ಹಂಚಿನಾಳಕ್ಕೆ ಪುನರ್ವಸತಿಗೆ ಬರಲು ತಯಾರಿಲ್ಲ.

ಈ) ಹೌದು, ಬಂದಿದೆ. ಹತ್ತು ಜನ ಜೀತ ವಿಮುಕ್ತರನ್ನು ಪುನರ್ವಸತಿ ಗೊಳಿಸಲಾಗಿದೆ. ಈ ಬಗ್ಗೆ ಒಂದು ಪೂರಕ ಟಿಪ್ಪಣಿಯನ್ನು ಲಗತ್ತಿಸಲಾಗಿದೆ.

ಉ) ಇಲ್ಲಿಯವರೆಗೆ ೩೩,೪೮೧ ಜೀತ ವಿಮುಕ್ತರನ್ನು ಪುನರ್ವಸತಿ ಗೊಳಿಸಲಾಗಿದೆ. ಈ ಪುನರ್ವಸತಿಗೊಂಡ ಜೀತ ವಿಮುಕ್ತರಿಗೆ ಹಾಲಿ ಕೊಡಂತ್ತಿರುವ ೪೦೦೦ ರೂಪಾಯಿಗಳು ಬಹಳ ಕಮ್ಮಿ. ಈ ಹಣವನ್ನು ಹೆಚ್ಚು ಗೊಳಿಸಲು ಬೇಡುತ್ತಿದ್ದಾರೆ.

ಅಮ್ಮಣಗಿ ಗ್ರಾಮದಲ್ಲಿ ಖಾಸಗಿ ವಿದ್ಯಾ ಸಂಸ್ಥೆಗೆ ಪ್ರೌಢಶಾಲೆ ಮಂಜೂರು ಮಾಡಿದ ಬಗ್ಗೆ.

೮೬೬. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಮ್ಮಣಗಿ, ತಾಲ್ಲೂಕು ಹುಕ್ಕೇರಿ ಗ್ರಾಮದಲ್ಲಿ ಮೊದಲಬೆ ಪ್ರೌಢಶಾಲೆಯನ್ನು ಯಾವ ಖಾಸಗಿ ಸಂಸ್ಥೆಗೆ ಮಂಜೂರು ಮಾಡಲಾಗಿತ್ತು ?

ಆ) ಮಂಜೂರಾದ ಪ್ರೌಢಶಾಲೆಯನ್ನು ರದ್ದು ಪಡಿಸಿ ಬೇರೆ ಖಾಸಗಿ ಸಂಸ್ಥೆಗೆ ಮಂಜೂರು ಮಾಡಿರುವುದು ನಿಜವೆ ?

ಇ) ಈಗಾಗಲೇ ಮಂಜೂರು ಮಾಡಿರುವ ಸಂಸ್ಥೆಯ ಹೆಸರೇನು ಹಾಗೂ ಮಂಜೂರು ಮಾಡಿದ ದಿನಾಂಕ ಯಾವುದು ?

ಈ) ಸರ್ಕಾರಿ ಪ್ರೌಢ ಶಾಲೆಯನ್ನು ಮಂಜೂರು ಮಾಡುವ ಬಗ್ಗೆ ಗ್ರಾಮಸ್ಥರು ನೀಡಿರುವ ನಿಧಿ ಹಾಗೂ ಜಮೀನಿನ ವಿವರವೇನು ?

ಉ) ಕಳೆದ ಅಧಿವೇಶನದಲ್ಲಿ ಸರ್ಕಾರಿ ಪ್ರೌಢ ಶಾಲೆಯನ್ನು ಮಂಜೂರು ಮಾಡುವುದಾಗಿ ಭರವಸೆ ನೀಡಿದರೂ ಸಹ ಅದನ್ನು ಸಂಸ್ಥೆಗೆ ಮಂಜೂರ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಮೈನಾರಿಟೀಸ್ ಸೋಷಿಯಲ್ ವೆಲ್‌ಫೇರ್ ಎಜುಕೇಷನ್ ಸೊಸೈಟಿ ಅವರಿಗೆ ಮಂಜೂರು ಮಾಡಲಾಗಿತ್ತು.

ಆ) ನಿಜ.

ಇ) ಎಸ್. ಜಿ. ಡಿ. ಪ್ರೌಢಶಾಲೆ, ನಿಡಸೋಸಿ, ಇವರ ಕನ್ನಡ ಮಾಧ್ಯಮದ ೮, ೯, ೧೦ ನೇ ತರಗತಿಯ ಒಂದೊಂದು ಶಾಖೆಯನ್ನು ಅಮ್ಮಣಗಿಗೆ ಸ್ಥಳಾಂತರ ಮಾಡಿದ ದಿನಾಂಕ ೩೧-೧೨-೧೯೮೫

ಈ) ಇದುವರೆಗೆ ಯಾವುದೇ ನಿಧಿ, ಜಮೀನು ನೀಡಿಲ್ಲ.

ಉ) ೧೯೮೬-೮೭ನೇ ಸಾಲಿಗೆ ಯಾವುದೇ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಬಾರದೆಂದು ಸರ್ಕಾರ ತೀರ್ಮಾನ ಕೈಗೊಂಡಿದೆ.